## ಇಲ್ಲಿಯವರೆಗೆ



ಮನೆಯ ಹೊರಗೆ ಏನೋ ಸದ್ದು ಕೇಳಿ ಬಂದು ಏನೆಂದು ನೋಡಲು ನಾರಾಯಣ ಹೊರಗೆ ಬಂದು ನೋಡಿದಾಗ ಯಾರೋ ಹಂತಕರು ಓಡಿ ಹೋದಂತಾಗುತ್ತದೆ. ಅದೇ ವೇಳೆಗೆ ಯಾರೋ ನಾರಾಯಣನನ್ನು ಗಟ್ಟಿಯಾಗಿ ಹಿಡಿದು 'ಬಾಯಿ ಬಿಟ್ಟರೆ ಹುಷಾರ್' ಎಂದು ಎಚ್ಚರಿಸಿ ಹೋಗುತ್ತಾರೆ. ಈ ಮಧ್ಯೆ ಪ್ರಾಣವಾಯು ಕಳೆದುಕೊಂಡ ಆತ್ಮ ಗೋಡೆಯ ಮೇಲೆ ಕುಳಿತುಕೊಂಡು ಶರೀರದ ಕಡೆಗೇ ನೋಡುತ್ತದೆ. ಕೃಷ್ಣ (ಕಥೆಯ ಮುಖ್ಯ ವ್ಯಕ್ತಿ) ಸತ್ತು ಹೋಗುತ್ತಾನೆ. ಆತನ ಪತ್ನಿ ಸಾವಿತ್ರಿ, ನಾರಾಯಣ ಮತ್ತು ಆತನ ಪತ್ನಿ ಲಕ್ಷ್ಮಿ, ಅಣ್ಣ ತಮ್ಮ. ಅವರ ಮನೆಯವರೆಲ್ಲ ಬರುತ್ತಾರೆ. ಸಂಜೆ ಸತ್ತ ಕಾರಣ ಹೆಣವನ್ನು ಒಳಗೆ ಇಡುವಂತಿಲ್ಲ. ಹೀಗಾಗಿ ಹೊರಗೆಯೇ ಇಡಲಾಗುತ್ತದೆ. ಮಗಳು ಮಗ ಅಮೆರಿಕದಲ್ಲಿರುವುದರಿಂದ ಅವರು ಹೆಣ ನೋಡಲು ಸಾಧ್ಯವಾಗಿರುವುದಲ್ಲ. ಇಷ್ಟಾಗಿ ಕಥೆ ನಾಯಕನ ಶಾಲಾದಿನಗಳತ್ತ ಹೊರಳುತ್ತದೆ.

ಬೀರುತ್ತಿದ್ದ. ನನಗೆ ನನ್ನ ಮಗಳು ಮತ್ತು ಮಗನನ್ನು ನೋಡುವ ಆಸೆಯಾಗಿ ಎದ್ದು ನಿಂತೆ. ಹು ಹೂ! ನಿಂತುಕೊಳ್ಳಲು ಆಗಲಿಲ್ಲ. ನನಗೆ ಕಾಲುಗಳೇ ಇರಲಿಲ್ಲ. ಬಗ್ಗಿ ನೋಡಲು ಕತ್ತೂ ಇರಲಿಲ್ಲ. ದೂರದಲ್ಲಿ ಗೋಡೆಯ ಮೇಲೆ ಕುಳಿತಿದ್ದ ಕಾರಣ ಅಲ್ಲಿಂದಲೇ ನೋಡಿದೆ. ಯಾರೂ ಕಾಣಿಸಲಿಲ್ಲ. ನನ್ನ ಮಗ ಮತ್ತು ಮಗಳನ್ನು ನೋಡಲು ಇನ್ನು ಮೇಲೆ ಆಗುವುದೇ ಇಲ್ಲ ಎನಿಸುತ್ತಿದೆ? ಈಗ ಅವರ ಮುಖಗಳನ್ನು ನೋಡಬೇಕಾದರೆ ಏನು ಮಾಡಬೇಕು? ಯೋಚಿಸಿದೆ. ಏನೂ ಹೊಳೆಯಲಿಲ್ಲ. ಕನಿಷ್ಠ ಮನೆಯ ಒಳಗೆ ಗೋಡೆಗೆ ನೇತಾಕಿರುವ ಅವರಿಬ್ಬರ ಫೋಟೋಗಳನ್ನಾದರೂ ನೋಡಬೇಕಿನಿಸುತ್ತಿದೆ. ಆದರೆ ಮನೆಯ ಒಳಕ್ಕೆ ಎದ್ದು ಹೋಗಲು ನನ್ನಿಂದ ಆಗುತ್ತಿಲ್ಲ. ಗೊಂದಲಗೊಂಡ ಮನಸ್ಸಿನಿಂದ ಏನೂ ಮಾಡಲಾಗದೆ ಅಲ್ಲೇ ಕುಳಿತುಕೊಂಡೆ. ಮನಸ್ಸು ತಳಮಳಗೊಂಡಿತ್ತು.

ಈ ಆಧುನಿಕ ತಂತ್ರಜ್ಞಾನ ನಿಜವಾಗಿಯೂ ಅದ್ಭುತ. ಸಾವಿರಾರು ಕಿಲೋಮೀಟರುಗಳ ದೂರದಲ್ಲಿರುವ ಒಬ್ಬ ಮನುಷ್ಯನ ಮುಖವನ್ನು ವಾಟ್ಸ್ಆಪ್ ಮೂಲಕ ಸಾಧಾರಣವಾಗಿ ನೋಡಬಹುದು. ನನ್ನಂತಹ ಆತ್ಮ ಪ್ರೇತಾತ್ಮಗಳಿಗೂ ಈ ಸವಲತ್ತನ್ನು ಒದಗಿಸಬೇಕಾಗಿದೆ. ಆದರೆ ಈಗ ಈ ಸಮಸ್ಯೆಯನ್ನು ಯಾರಿಗೆ ಹೇಳುವುದು? ಬಹುಶಃ ನನ್ನ ಹಾಗೆ ಸತ್ತವರೆಲ್ಲ ನನಗೆ ಸಿಕ್ಕಿದಾಗ ಅವರ ಜೊತೆಗೆ ಮಾತನಾಡಿ ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕಿದೆ. ದೆವ್ವಗಳಾಗಿರುವ ವಿಜ್ಞಾನಿಗಳು ತಂತ್ರಜ್ಞಾನಿಗಳು ಯಾರಾದರೂ ಸಿಗಬಹುದಲ್ಲವೆ? ಅಬ್ರಹಾಂ ಲಿಂಕನ್‌ನ ಪ್ರೇತ ಅಮೆರಿಕಾದ ವೈಟ್ ಹೌಸ್‌ನಲ್ಲಿ ಈಗಲೂ ರಾತ್ರಿಯೆಲ್ಲ ಓಡಾಡುತ್ತಿರುತ್ತದಂತೆ.

ಇಷ್ಟೊತ್ತಿಗೆ ನನ್ನ ಊರಿನಲ್ಲಿ ಸತ್ತು ಹೋಗಿರುವ ಕೆಲವು ಹಳೆ ದೆವ್ವಗಳಾದರು ನನ್ನ ಹತ್ತಿರಕ್ಕೆ ಬಂದಿರಬಹುದಲ್ಲ. ಬಹುಶಃ ನಾನು ಒಬ್ಬನೇ ಕತ್ತಲಲ್ಲಿ ಕುಳಿತಿದ್ದರೆ ಬರುತ್ತಿದ್ದವೊ ಏನೊ? ವಿದ್ಯುತ್ ದೀಪಗಳ ಬೆಳಕಿನಲ್ಲಿ ಮತ್ತು ವಿದ್ಯುತ್ ಇರುವ ಕಡೆ ದೆವ್ವಗಳು ಬರುವುದಿಲ್ಲ ಎಂದು ನಾನು ಬದುಕಿದ್ದಾಗ ಜನರು ಮಾತನಾಡಿಕೊಳ್ಳುತ್ತಿದ್ದರು. ಬಹುಶಃ ದೀಪಗಳಿದ್ದುದರಿಂದ ದೆವ್ವಗಳು ನನ್ನ ಹತ್ತಿರಕ್ಕೆ ಬರುತ್ತಿಲ್ಲವೊ ಏನೊ? ಸ್ವಲ್ಪ ಕತ್ತಲಿಗೆ ಹೋಗಿ ನೋಡೋಣ ಎಂದುಕೊಂಡು ಹಿಂದಕ್ಕೆ ತಿರುಗಿ ನೋಡಿದೆ. ಏನೂ ಕಾಣಿಸುತ್ತಿಲ್ಲ ಅಲ್ಲೊಂದು ಇಲ್ಲೊಂದು ದೀಪಗಳು ಕಾಣಿಸುತ್ತಿದ್ದವು. ಆಕಾಶದ ಕಡೆಗೆ ನೋಡಿದಾಗ ಏನೂ ಕಾಣಿಸಲಿಲ್ಲ. ನಿಧಾನವಾಗಿ ನೋಡಿದರೆ ದೂರದಲ್ಲಿ ಕೆಲವು ನಕ್ಷತ್ರಗಳು ಮಿನುಗುತ್ತಿದ್ದವು.

ನಮ್ಮೂರಿನ ಬೆಟ್ಟದ ಮೇಲೆ ಬ್ಯಾಟರಾಯನಸ್ವಾಮಿ ಗುಡಿ ಶಿಖರದ ಮೇಲಿದ್ದ ವಿದ್ಯುತ್ ದೀಪ ನಕ್ಷತ್ರದಂತೆ ಮಿಣಕ್ ಮಿಣಕ್ ಎಂದು ಹೊಳೆಯುತ್ತಿತ್ತು. ದೊಡ್ಡವರು, ಮಕ್ಕಳಿಗೆ ಸತ್ತವರೆಲ್ಲ ನಕ್ಷತ್ರಗಳಾಗುತ್ತಾರೆ ಎನ್ನುವ ಮಾತುಗಳನ್ನು ಕೇಳಿದ್ದೇನೆ. ನಾನು ಒಂದು ನಕ್ಷತ್ರವಾಗುತ್ತೇನೆಯೆ? ಭೌತಶಾಸ್ತ್ರ ಓದಿದ್ದ ನನಗೆ ಅದೆಲ್ಲ ಸುಳ್ಳು ಎನಿಸಿತು. ಆದರೆ ಒಬ್ಬ ಮನುಷ್ಯ, ಒಂದು ಪ್ರಾಣಿ, ಒಂದು ಗಿಡ, ಬೆಂಕಿ, ಗಾಳಿ, ನೀರು, ಮಣ್ಣು ಎಲ್ಲದಕ್ಕೂ ವಿಶ್ವದಲ್ಲಿ ಸಂಬಂಧವಿದೆ. ನಾನು ಈಗ ಸತ್ಹೋಗಿದ್ದು ನನ್ನ ದೇಹ ಪ್ರಾಣವಾಯುವನ್ನು ಕಳೆದುಕೊಂಡಿದೆ. ದೇಹವೇನೊ ಮಣ್ಣು ಸೇರಿ ಮಣ್ಣಾಗುತ್ತದೆ. ನನ್ನ ಪ್ರಾಣ, ಆತ್ಮ ಅಥವಾ ಪ್ರೇತಾತ್ಮ ಏನಾಗುತ್ತದೆ? ಬದುಕಿರುವ ಮನುಷ್ಯನ ಸುತ್ತ ಒಂದು ಹೊಳೆಯುವ ಬೆಳಕಿನ ಪ್ರಭೆ ಇರುತ್ತದೆಂದು ವಿಜ್ಞಾನದಲ್ಲಿ ಹೇಳಲಾಗಿದೆ. ಆ ವಿಷಯ ಜ್ಞಾಪಕ ಬಂದಿದ್ದೇ ನನ್ನ ದೇಹದ ಕಡೆ ನೋಡಿದೆ. ಕತ್ತಲಲ್ಲಿ ಏನೂ ಕಾಣಿಸಲಿಲ್ಲ. ಬುದ್ಧನು ನಡೆದಾಡುತ್ತಿದ್ದಾಗ ಹತ್ತು ಅಡಿಗಳ ದೂರದವರೆಗೂ ಅವನ ತಲೆಯ ಸುತ್ತಲೂ ಬೆಳಕಿನ ಪ್ರಭೆ ಕಾಣಿಸುತ್ತಿತ್ತಂತೆ? ಯಾವುದೇ ದೇವರ ತಲೆಯ ಸುತ್ತಲೂ ಇಂತಹ ಬೆಳಕು ಪ್ರಭೆಗಳನ್ನು ಚಿತ್ರಿಸಿರುವುದನ್ನು ನೋಡಬಹುದಾಗಿದೆ.

* * *

### ಹಳ್ಳಿ ಹುಡುಗಿಯರ ಮುಗ್ಧತೆ; ಹೆಣ್ಣಿನ ಅಪ್ಪುಗೆ

ನನಗೊಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ನಾನು ಸತ್ತು ಹೋಗಿರುವುದರಿಂದ ನನ್ನನ್ನ ಕೇಳುವವರು ಯಾರೂ ಇಲ್ಲ. ಬೆಂಗಳೂರಿನ ತಣ್ಣಗಿನ ವಾತಾವರಣದಲ್ಲಿದ್ದ ಕಾರಣ ನನ್ನ ದೇಹದ ಬಣ್ಣ ಬದಲಾಗಿ ಹೋಗಿತ್ತು. ದಿನಾ ಬೆಳಿಗ್ಗೆ ಸೋಪು ಹಾಕಿಕೊಂಡು ಸ್ನಾನ ಮಾಡುತ್ತಿದ್ದೆ. ಹಾಸ್ಟೆಲ್‌ನಲ್ಲಿ ಒಳ್ಳೆಯ ಊಟ ಬೇರೆ. ಆಗಲೇ ನನ್ನ ಎತ್ತರ 5.8 ಇದ್ದು ಸಾಕಷ್ಟು ಫೇರಾಗಿದ್ದೆ. ನಮ್ಮ ಹಳ್ಳಿಯ ಯುವತಿಯರು ನಾನು ಊರಿಗೆ ಹೋಗಿದ್ದಾಗ ನನ್ನನ್ನು ಮರೆಯಲ್ಲಿ ನಿಂತು ನೋಡುತ್ತಿದ್ದರು. ಕೆಲವು ಹೆಣ್ಣು ಮಕ್ಕಳಂತೂ ನನ್ನ ಎದುರಿಗೆ ಬರಲು ತುದಿಗಾಲಲ್ಲಿ ನಿಲ್ಲುತ್ತಿದ್ದರು. ಉದ್ದುದ್ದವಾದ ಕಪ್ಪು ಜಡೆಗಳು. ಜಡೆಗಳಲ್ಲಿ ಸಿಕ್ಕಿಸಿದ ಹೂವುಗಳು, ಜಡೆಗಳ ಕೊನೆಯಲ್ಲಿ ಕಟ್ಟಿದ ಬಣ್ಣಬಣ್ಣದ ಟೇಪುಗಳು. ಬಣ್ಣ ಬಣ್ಣದ, ರೇಷ್ಮೆ ಲಂಗಾ ದಾವಣಿಗಳು. ಕೆಲವು ಹೆಣ್ಣು ಮಕ್ಕಳು ಮುಖಕ್ಕೆ ಅರಿಶಿನ ಹಚ್ಚಿದರೆ ಕೆಲವರು ತೆಳುವಾಗಿ ಪಾಂಡ್ಸ್ ಪೌಡರ್ ಮಾತ್ರ ಹಚ್ಚುತ್ತಿದ್ದರು. ಆಗಿನ ಹುಡುಗಿಯರ ನಯ ನಾಜೂಕು ಲಾವಣ್ಯವೇ ಬೇರೆ. ಅಪ್ಪಟ ಹಳ್ಳಿಯ ಸುಂದರಿಯರು. ಅವರು ಮಾತನಾಡುವಾಗ ನಾಚಿಕೊಳ್ಳುವ ರೀತಿ, ಎಲ್ಲದರಲ್ಲೂ ಒಂದು ರೀತಿಯ ಮುಗ್ಧತೆ ಕಾಣಿಸುತ್ತಿತ್ತು.

ನಮ್ಮ ಮನೆ ಹಿಂದೆ ಬ್ರಾಹ್ಮಣರ ಮನೆ ಇದ್ದು, ಗೋಪಾಯ್ಯ ದೀಕ್ಷಿತ್ ಪತ್ನಿ ಸಾವಿತ್ರಮ್ಮನಿಗೆ ಲಕ್ಷ್ಮೀದೇವಿ ಎಂಬ ಮಗಳಿದ್ದಳು. ಅವಳು ಯಾವಾಗಲೂ ನಮ್ಮ ಮನೆಯ ಮುಂದೆಯೇ ಓಡಾಡುತ್ತಿದ್ದ ಕಾರಣ ದಿನಕ್ಕೆ ನಾಲ್ಕಾರು ಸಲ ನನ್ನ ಕಣ್ಣಿಗೆ ಬೀಳುತ್ತಿದ್ದಳು. ತುಸು ದಪ್ಪ ಮೂಗಿನ ದುಂಡು ಮುಖದ ಲಕ್ಷ್ಮೀದೇವಿ ಕೆಂಪಾಗಿದ್ದು ಗುಂಗುರು ಕೂದಲು ಜಡೆ ಹಾಕಿಕೊಳ್ಳುತ್ತಿದ್ದಳು. ಮುಖದ ಮೇಲೆ ಆಗಾಗ ಮೊಡವೆಗಳು ಇಣುಕುತ್ತಿದ್ದವು. ನಾಲ್ಕನೇ ತರಗತಿಯವರೆಗೂ ಓದಿ ಅನಂತರ ದೂರದ ಕೋಲಾರಕ್ಕೆ ಹೋಗಲಾರದೆ ಮನೆಯಲ್ಲೆ ಉಳಿದು ಕೊಂಡಿದ್ದಳು. ಅವಳು ಎದುರುಗೊಂಡಾಗೆಲ್ಲ ನನ್ನ ಹೃದಯ ಢವಢವ ಎಂದು ಹೊಡೆದುಕೊಳ್ಳುತ್ತಿತ್ತು. ಅವಳನ್ನು ದಿನಾ ಬೆಳಿಗ್ಗೆ ನೋಡುತ್ತಲೇ ಇರಬೇಕೆನಿಸುತ್ತಿತ್ತು. ನನ್ನ ತಾಯಿ ಮನೆ ಕೆಲಸಗಳಲ್ಲಿ ನಿರತಳಾಗಿದ್ದರೆ ನನ್ನ ತಂದೆ ಬೆಳಿಗ್ಗೆ ಎದ್ದರೆ ಹೊಲ ಇಲ್ಲ ಗದ್ದೆಯ ಕಡೆಗೆ ಹೋಗಿ ಬಿಡುತ್ತಿದ್ದರು. ನಾನು ಅವಳಿಗಾಗಿ ಮನೆ ಹಿಂದಿನ ಗೋಡೆಯ ಪಕ್ಕ ನಿಂತು ಕಾಯುತ್ತಿದ್ದೆ. ಕೆಲವೊಮ್ಮೆ ಅವಳು ತೋಟದ ಕಡೆಗೆ ಹೋದರೆ ಹಿಂದೆಯೇ ಹೋಗುತ್ತಿದ್ದೆ.